

# ಉಭಯಲಿಂಗಿ ಮೃದ್ವಂಗಿ

■ ಚಿತ್ರ– ಲೇಖನ:
**ಶಶಿಧರಸ್ವಾಮಿ ಆರ್. ಹಿರೇಮಠ**

ಮೃದು ಶರೀರದ ಮೇಲೆ ಗಟ್ಟಿ ಚಿಪ್ಪು ಹೊಂದಿರುವ ಮೃದ್ವಂಗಿ ವಂಶದ ಜೀವಿಯಾದ ಶಂಖಹುಳು ಅಥವಾ ಬಸವನಹುಳು ಉಭಯಲಿಂಗಿಗಳು. ಇವುಗಳಲ್ಲಿ ಹೆಣ್ಣು, ಗಂಡು ಎಂಬ ಬೇರೆ ಬೇರೆ ಜೀವಿಗಳಿರುವುದಿಲ್ಲ. ಅವುಗಳ ದೇಹದೊಳಗೆ ವೀರ್ಯಾಣು ಹಾಗೂ ಅಂಡಾಣುಗಳು ಉತ್ಪತ್ತಿಯಾಗುತ್ತವೆ.

ಆದರೂ ವಿಸ್ಮಯವೆಂಬಂತೆ ಒಂದು ಬಸವನಹುಳು ಮತ್ತೊಂದು ಬಸವನಹುಳುವಿನೊಡನೆ ಮಿಲನ ಕೂಟದಲ್ಲಿ ತೊಡಗುತ್ತದೆ. ಈ ಮಿಲನದಲ್ಲಿ ಒಂದಕ್ಕೊಂದು ಪರಸ್ಪರ ವೀರ್ಯಾಣುಗಳನ್ನು ಪಡೆದುಕೊಳ್ಳುತ್ತಾ ಏಕಕಾಲದಲ್ಲಿ ಅವು ಹೆಣ್ಣು–ಗಂಡುಗಳಂತೆ ವರ್ತಿಸುತ್ತವೆ. ಆದ್ದರಿಂದ ಎಲ್ಲ ಬಸವನಹುಳುಗಳು ಮಾತೃಗಳೇ ಆಗಿವೆ. ಈ ಮಿಲನ ಕೂಟವು ಅವುಗಳ ಮುಂದಿನ ಪೀಳಿಗೆಗೆ ಕಾರಣವಾಗಿದೆ.

ಇನ್ನೊಂದು ಸೋಜಿಗದ ವಿಷಯವೆಂದರೆ ಕೆಲ ಸಲ ಬೇರೆಯ ಬಸವನಹುಳು ಸಿಗದಿದ್ದಾಗ ಅವು ತನ್ನಲ್ಲಿರುವ ವೀರ್ಯಾಣುಗಳು ತನ್ನ ಮೊಟ್ಟೆಯಲ್ಲಿ ಸೇರುವಂತೆ ಮಾಡಿ ತಾನೇ ಮಿಲನಗೊಳ್ಳುತ್ತದೆ! ಈ ರೀತಿಯಾಗಿ ತಾನೇ ತಾನಾಗಿ ತಾಯಿಯಾಗುತ್ತದೆ. ಇದು ಉಭಯಲಿಂಗಿಗಳಲ್ಲಿರುವ ಮಾತೃತ್ವ ಅಥವಾ ತಾಯ್ತನದ ವೈಚಿತ್ರ! ಹೀಗಾಗಿ ಬಸವನಹುಳುಗಳನ್ನು ಉಭಯಲಿಂಗಿಗಳೆಂದು ಕರೆಯುತ್ತಾರೆ.

ಈ ರೀತಿಯ ಉಭಯಲಿಂಗತ್ವವನ್ನು ಎರೇಹುಳುವಿನಲ್ಲಿಯೂ ಕಾಣಬಹುದು. ಹಾಗಂತ ಎಲ್ಲ ಬಸವನಹುಳುಗಳು ಉಭಯಲಿಂಗಿಗಳಲ್ಲ. ಕೆಲ ಪ್ರಬೇಧದ ಬಸವನಹುಳುಗಳಲ್ಲಿ ಗಂಡು ಹಾಗೂ ಹೆಣ್ಣು ಬೇರೆ ಬೇರೆಯಾಗಿವೆ. ಇವು ಸಮುದ್ರ ನೀರು ಮತ್ತು ಸಿಹಿ ನೀರು ನೆಲೆಗಳಲ್ಲಿ ವಾಸಿಸುತ್ತವೆ.

ಹೆಲಿಕ್ಸ್ ಪೊಮಾಟಿಯಾ ಜಾತಿಯ ಬಸವನಹುಳುವನ್ನು ಫ್ರೆಂಚರು ವಿಶೇಷ ಆಹಾರದಲ್ಲಿ ಬಳಸುತ್ತಾರೆ. ದೇವರ ಪೂಜೆಯಲ್ಲಿ ಬಳಸುವ ಶಂಖದಿಂದ ಹೊರ ಹೊಮ್ಮುವ ಶಂಖನಾದದಿಂದ ರುದ್ರನು ಸಂತುಷ್ಟನಾಗುತ್ತಾನೆ ಎಂಬ ನಂಬಿಕೆ ನಮ್ಮಲ್ಲಿದೆ. ಶ್ರೀ ಕೃಷ್ಣನು ಮಹಾಭಾರತದ ಯುದ್ಧದಲ್ಲಿ ಶಂಖನಾದ ಮೊಳಗಿಸಿದ ಎಂದು ಪುರಾಣ ಹೇಳುತ್ತದೆ. ಕೆಲ ಜಾತಿಯ ಬಸವನಹುಳುಗಳು ರೈತರ ಬೆಳೆಗಳನ್ನು ತಿಂದು ನಾಶಪಡಿಸುತ್ತವೆ.

ಸುಮಾರು 500 ದಶಲಕ್ಷ ವರ್ಷಗಳ ಹಿಂದೆ ಈ ಮೃದ್ವಂಗಿಗಳು ಭೂಮಿಯ ಮೇಲೆ ಬದುಕಿರುವ ಬಗ್ಗೆ ಕ್ಯಾಬ್ರಿಯನ್ ಯುಗದಲ್ಲಿಯ ಪಳಯುಳಿಕೆಗಳನ್ನು ವಿಜ್ಞಾನಿಗಳು ಪತ್ತೆ ಮಾಡಿದ್ದಾರೆ. ಪ್ರಪಂಚದಾದ್ಯಂತ 60,000 ಜಾತಿಯ ಮೃದ್ವಂಗಿಗಳಿರುವ ಬಗ್ಗೆಯೂ ದಾಖಲಿಸಿದ್ದಾರೆ. ●